**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ**

**ಸಿ.ಸಿ.ನಂ.255/2020**

ಫಿರ್ಯಾದಿ: ಕರ್ನಾಟಕ ಸರ್ಕಾರ ಪರ: ಮಳಖೇಡ ಪೊಲೀಸ್ ಠಾಣೆ

-:: ವಿರುದ್ಧ ::-

ಆರೋಪಿ: ದೇವಪ್ಪ ತಂದೆ ಗಂಗಪ್ಪ ಮಗಿ,
ವ: 27 ವರ್ಷ, ಉ: ಡ್ರೈವರ ಕೆಲಸ,
ಸಾ: ಖೈರಾಮಡಗಿ ಗ್ರಾಮ, ತಾ: ಲಿಂಗಸೂರು.

-----

**ಆ ಪಾ ದ ನೆ**

ಅಭಿಯೋಜನೆಯವರು ನಿನ್ನ ಮೇಲೆ ಹೊರಿಸಿರುವ ಆರೋಪವೇನೆಂದರೆ, ದಿನಾಂಕ 12-09-2019 ರಂದು ರಾತ್ರಿ 8.20 ಗಂಟೆ ಸುಮಾರಿಗೆ ಮಳಖೇಡ ಪೊಲೀಸ್ ಠಾಣಾ ವ್ಯಾಪ್ತಿಯ ಮಳಖೇಡ ಎಪಿಎಂಸಿ ಗೇಟ್ ಹತ್ತಿರ ನೀನು ನಿನ್ನ ವಶದಲ್ಲಿದ್ದ ಲಾರಿ ನಂ.K-32/D-3224 ನೇದ್ದನ್ನು ಸಾರ್ವಜನಿಕ ರಸ್ತೆಯ ಮೇಲೆ ಮಾನವನ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿದ್ದು, ಕಾರಣ ನೀನು ಭಾ.ದಂ.ಸಂ. ಕಲಂ. 279 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀನು ನಿನ್ನ ವಶದಲ್ಲಿದ್ದ ಲಾರಿ ನಂ.K-32/D-3224 ನೇದ್ದನ್ನು ಸಾರ್ವಜನಿಕ ರಸ್ತೆಯ ಮೇಲೆ ಅತಿವೇಗವಾಗಿ ಚಲಾಯಿಸಿಕೊಂಡು ಹೋಗಿ ರಸ್ತೆ ಬದಿಯಲ್ಲಿ ಹೋಗುತ್ತಿದ್ದ ಶಿವಶರಣಪ್ಪ ನಂದೂರ ಈತನನ್ನು ಡಿಕ್ಕಿ ಹೊಡೆದಿದ್ದರಿಂದ ಲಾರಿಯ ಎಡಗಡೆ ಮುಂದಿನ ಚಕ್ರ ಹಾಯ್ದು ಹೋಗಿದ್ದರಿಂದ, ಶಿವಶರಣಪ್ಪನ ತಲೆಗೆ ಭಾರಿ ಗಾಯಗಳಾಗಿ ಸ್ಥಳದಲ್ಲೇ ಮೃತಪಟ್ಟಿದ್ದು, ಕಾರಣ ನೀನು ಭಾ.ದಂ.ಸಂ. ಕಲಂ 304(ಎ) ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಿರುವ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತನಾದ ನೀನು ಅಪಘಾತ ಪಡಿಸಿದ ನಂತರ ಗಾಯಾಳುವಿಗೆ ಪ್ರಥಮ ಚಿಕಿತ್ಸೆ ಕೊಡಿಸದೆ ಘಟನಾ ಸ್ಥಳದಲ್ಲಿಯೇ ಬಿಟ್ಟು ಓಡಿಹೋಗಿದ್ದು, ಕಾರಣ ನೀನು ಮೋಟಾರು ವಾಹನ ಕಾಯ್ದೆ ಕಲಂ 187 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

(ಆರೋಪಣೆಯನ್ನು ಆರೋಪಿತನಿಗೆ ಗೊತ್ತಿದ್ದ ಭಾಷೆಯಲ್ಲಿ ಓದಿ ಹೇಳಿ ತಿಳಿಸಿದ ನಂತರ ಅವರ ಹೇಳಿಕೆಯನ್ನು ಪಡೆದು ನಮೂದಿಸಿದ್ದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣಿಕರಿಸುತ್ತೇನೆ.)

27/07/22

ದಿನಾಂಕ 27-07-2022

ಪ್ರ.ದ.ನ್ಯಾ.ದಂ. ಸೇಡಂ.